ದಿನಾಂಕ: 22-11-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟಿಸವಾಲು: ಶ್ರೀ ಎ ನಾಗಪ್ಪ ವಕೀಲರಿಂದ:-**

1. ದಾವಾದ ಆಸ್ತಿಗಳು ಹುಲುಗಪ್ಪ ಮತ್ತು ಅಮರಪ್ಪನ ಹೆಸರಿಗೆ ಇವೆ ಎಂದರೆ ಸರಿ. ಸ ನಂ 206, ಗಂಗಮ್ಮನ ಹೆಸರಿಗೆ ಇದೆ ಎಂದರೆ ಸರಿ. ಗಂಗಮ್ಮ ತನ್ನ ಗಂಡನಾದ ಹುಲುಗಪ್ಪ ಮಾವ ಅಮರಪ್ಪನ ವಿರುದ್ದ ಅಸಲು ದಾವಾ ನಂ 110/1980 ನ್ನು ದಾಖಲು ಮಾಡಿದ್ದಳು ಎಂದರೆ ಸರಿ. 08-00 ಎಕರೆ ಆಸ್ತಿಯನ್ನು ಗಂಗಮ್ಮನಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

2. ನನಗೆ ಈಗ 37 ವರ್ಷ. ನನಗೆ 30 ವರ್ಷ ವಯಸ್ಸು ಇದೆ 37 ವರ್ಷ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ ನಂ 206, 06 ಎಕರೆ 13 ಗುಂಟೆಯಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂ 110/1980 ನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಅಸಲು ದಾವಾ ನಂ 110/1980 ರಲ್ಲಿ ಹುಲಿಗೆಪ್ಪ ಗಂಗಮ್ಮ ನನ್ನ ಹೆಂಡತಿ ಅಂತಾ ಒಪ್ಪಿಕೊಂಡಿದ್ದಾನೆಂದರೆ ಸರಿ. ಗಂಗಮ್ಮನಿಗೆ ಅಂದಾಜು 70 ವರ್ಷ ವಯಸ್ಸು ಇರಬಹುದು ಎಂದರೆ ನನಗೆ ಮಾಹಿತಿ ಇಲ್ಲ. ಸ ನಂ 206 ಎಷ್ಟು ಎಕರೆ ಇದೆ ಎಂದರೆ ಸಾಕ್ಷಿಯು 27-00 ಎಕರೆ ಇರಬಹುದು, ಅದರಲ್ಲಿ ನಮ್ಮ ತಾಯಿಗೆ ಕೊಟ್ಟಿದ್ದಾರೆ. ಸದರಿ ಸರ್ವೆ ನಂಬರ್ ನಲ್ಲಿ ಕೆ ಬಿ ಜೆ ಎನ್ ಎಲ್ ಕಾಲುವೆಗಾಗಿ 03 ಎಕರೆ 15 ಗುಂಟೆ ಹೋಗಿದೆ ಎಂದರೆ ಸರಿ. ನಂತರ ಉಳಿದ ಆಸ್ತಿ 16-00 ಎಕರೆ ಎಂದರದರೆ ಸರಿ. ನಾನು ದಾವಾದ ಆಸ್ತಿ ಚಕ್ ಬಂದಿ ಬರೆಸಿದ್ದೇನೆ. 1 ನೇ ಪ್ರತಿವಾದಿ ನನ್ನ ತಾಯಿಗೆ 50 ವರ್ಷ ಇರಬಹುದು. ನನ್ನ ತಂದೆ ತೀರಿಕೊಂಡು 12-13 ವರ್ಷ ಆಗಿದೆ. ದಾವಾದ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ, ನನಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಕಂದಾಯ ಇಲಾಖೆಗೆ ನಾವು

ಹುಲುಗಪ್ಪನ ವಾರಸುದಾರರು ಇದ್ದೇವೆ ಅಂತಾ ವರ್ಗಾವಣೆಗೆ ಅರ್ಜಿ ಕೊಟ್ಟಿಲ್ಲ ಎಂದರೆ ಸರಿ. ಹುಲುಗಪ್ಪ ತೀರಿಕೊಂಡ ಮೇಲೆ ಗಂಗಮ್ಮ ಮಾತ್ರ ವಾರಸುದಾರರು ನಾವು ವಾರಸುದಾರರು ಅಲ್ಲ ಎಂದರೆ ಸರಿಯಲ್ಲ.

4. 8 ನೆ ಪ್ರತಿವಾದಿ ಮನೆತನದ ಅಡಚಣೆಗಾಗಿ 06 ಎಕರೆ 13 ಗುಂಟೆ 9 ನೇ ಪ್ರತಿವಾದಿಗೆ ಸ ನಂ 206/ ಹಿಸ್ಸಾ 3 ರಲ್ಲಿ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿ. 8 ನೇ ಪ್ರತಿವಾದಿ 6 ಲಕ್ಷ 33 ಸಾವಿರ ರೂಪಾಯಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. 9 ನೇ ಪ್ರತಿವಾದಿ ಎಲ್ಲವನ್ನು ವಿಚಾರಣೆ ಮಾಡಿ ದಾಖಲಾತಿಯನ್ನು ಪರಿಶೀಲಿಸಿ ಖರೀದಿಸಿದ್ದಾರೆಂದರೆ ನಮಗೂ ಕೇಳಬೇಕು ಎಂದು ಸಾಕ್ಷಿ ನುಡಿಯುತ್ತಾರೆ. 9 ನೇ ಪ್ರತಿವಾದಿ ನಮ್ಮನ್ನು ಕೇಳುವ ಪ್ರಶ್ನೆ ಉದ್ಭವ ಆಗುವುದಿಲ್ಲ ಎಂದರೆ ಸರಿಯಲ್ಲ. ಖರೀದಿಯಾದ ಮೇಲೆ 9 ನೇ ಪ್ರತಿವಾದಿ ಹೆಸರು ಪಹಣಿಯಲ್ಲಿ ನಮುದು ಇದೆ ಆತನೇ ಕಬ್ಜಾದಲ್ಲಿದ್ದಾನೆಂದರೆ ಸರಿ. 9 ನೇ ಪ್ರತಿವಾದಿ ಹೆಸರಿಗೆ ಪಹಣಿ ಬಂದ ನಂತರ ನಾನು ಅದನ್ನು ಕಂದಾಯ ಇಲಾಖೆಯಲ್ಲಿ ಪ್ರಶ್ನಿಸಿದ್ದೇನೆ. ಕಂದಾಯ ಇಲಾಖೆಯಲ್ಲಿ ಅಪೀಲು ಹಾಕಿದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿಲ್ಲ.

5. 9 ನೇ ಪ್ರತಿವಾದಿ ಸ ನಂ 206 ಹಿಸ್ಸಾ 3, 06 ಎಕರೆ 13 ಗುಂಟೆಯನ್ನು ತನ್ನ ಮನೆತನದ ಅಡಚಣೆಗಾಗಿ 01-11-2020 ರಂದು ಸ್ವಂದನ ಎಮ್ ನಾಯಕ ಸಾ: ಆಶಿಹಾಳ ಇವರಿಗೆ 9 ಲಕ್ಷ 50 ಸಾವಿರ ರೂಪಾಯಿಗೆ ಮಾರಾಟ ಮಾಡಿದ್ದಾನೆಂದರೆ ಸರಿ. ಖರೀದಿ ಆದ ಮೇಲೆ ಸ್ವಂದನ ಎಮ್ ನಾಯಕ ಹೆಸರು ಪಹಣಿ ಪತ್ರಿಕೆಯಲ್ಲಿ ನಮುದು ಆಗಿದೆ ಎಂದರೆ ಸರಿ. ಸ್ವಂದನ ಎಮ್ ನಾಯಕ ಪಕ್ಷಗಾರರನ್ನಾಗಿ ಮಾಡಿಲ್ಲ, ಆ ಖರೀದಿ ಪತ್ರ ಬಂದನಕಾರಿಯಲ್ಲ ಅಂತಾ ವಾದ ಪತ್ರದಲ್ಲಿ ಬರೆಸಿ ಹಾಕಿಲ್ಲ ಎಂದರೆ ಸರಿ ಗಂಗಮ್ಮ ಅಸಲು ದಾವಾ ನಂ 80/2012 ನ್ನು ಪಾಲು ವಿಭಾಗ ಕೋರಿ ಹಾಕಿದ್ದರು ಎಂದೆ ಗೊತ್ತಿಲ್ಲ. ಸದರಿ ದಾವಾ ನಡೆಸಲಾರದೆ ವಜಾ ಆಯಿತು ಎಂದರೆ ಸರಿ. 2012 ರ ಕ್ಕಿಂತ ಪೂರ್ವದಲ್ಲಿ ಮತ್ತು ನಂತರದಲ್ಲಿ

ನಾನು ಗಂಗಮ್ಮ ನ ಜೊತೆ ರಾಜಿ ವಿಷಯ ಪ್ರಸ್ತಾಪ ಮಾಡಿಲ್ಲ ಮತ್ತು ರಾಜಿಯಾಗಿಲ್ಲ ಎಂದರೆ ಸರಿ.

6. ಗಂಗಮ್ಮ ಹುಲಿಗೆಪ್ಪನ ಮೊದಲನೇ ಹೆಂಡತಿ ಎಂದರೆ ಸರಿ. ಆದ್ದರಿಂದ ನಮಗೆ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ದಾವಾ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹುಲಿಗೆಪ್ಪನ ವಾರಸುದಾರನಲ್ಲ, ದಾವೆಯಲ್ಲಿ ನನಗೆ ಹಕ್ಕಿಲ್ಲ, ನನಗಾಗಲಿ, ನನ್ನ ಸಹೋದರ ಸಹೋದರಿಯರಿಗಾಗಲೀ ದಾವಾದ ಆಸ್ತಿಯಲ್ಲಿ ಹಕ್ಕು ಇಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲು**: 8 ನೇ ಪ್ರತಿವಾದಿ ಯಾವುದೇ ರೀತಿ ಲಿಖಿತ ಹೇಳಿಕೆ ಸಲ್ಲಿಸದೇ ಇದ್ದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

( ಚಂದ್ರಶೇಖರ.ಪಿ.ದಿಡ್ಡಿ )

ಹಿರಿಯ ಸಿವಿಲ್ ನ್ಯಾಯಾಧೀಶರು,

ಲಿಂಗಸೂಗುರು.